**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆಃ 619/2022**

ಚಾಸಾಃ1 ಪ್ರಾಸಾಃ1

| | | |
|---|---|---|
| ಹೆಸರು | : | ಎಸ್ ಮಹದೇವ್ |
| ಗಂಡನ/ತಂದೆಯ ಹೆಸರು | : | ಲೇಟ್ ಸಿದ್ದೇಗೌಡ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | **ಮುದುಗೆರೆ** ಗ್ರಾಮ |

**ದಿನಾಂಕ 13.03.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಚಾಸಾ2 ರವರು ತಮ್ಮ ಜಾಗಕ್ಕೆ ಇ- ಖಾತಾ ಮಾಡಿಸಿಕೊಳ್ಳಲು ಪಂಚಾಯತಿಗೆ ಅರ್ಜಿಯನ್ನು ಸಲ್ಲಿಸಿದ್ದು, ಅದರಂತೆ ದಿಃ10.06.2022 ರಂದು ಮಧ್ಯಾಹ್ನ 12.30 ಗಂಟೆಗೆ ಸ್ಥಳ ಪರಿಶೀಲನೆಗಾಗಿ ಬಂದಿದ್ದು, ಆ ಸಮಯದಲ್ಲಿ ಚಾಸಾ2 ರವರು ಅವರ ಜಾಗದ ಅಳತೆ ವಿಚಾರವಾಗಿ ನನ್ನನ್ನು ಸಹ ಕರೆದಿದ್ದು, ಆಗ ನಾನು ಚಾಸಾ2 ರವರ ಸ್ಥಳಕ್ಕೆ ಹೋಗಿರುತ್ತೇನೆ. ಆಗ ಸದರಿ ಸ್ಥಳಕ್ಕೆ 1 ರಿಂದ 3ನೇ ಆರೋಪಿತರು ಬಂದಿರುತ್ತಾರೆ. 1ರಿಂದ 3ನೇ ಆರೋಪಿತರು ಉದ್ದೇಶಪೂರ್ವಕವಾಗಿ ನಮ್ಮ ಜೊತೆ ಜಗಳವಾಡಲು ಬಂದಿದ್ದರು ಅವರುಗಳು ನನ್ನನ್ನು ಕೆಟ್ಟ ಶಬ್ದಗಳಿಂದ ಬೈದಿರುತ್ತಾರೆ. ಆಗ ನಾನು ಯಾವ ಕಾರಣಕ್ಕೆ ಜಗಳ ಮಾಡುತ್ತಿದ್ದೀರಿ ಅನವಶ್ಯಕವಾಗಿ ಜಗಳ ಮಾಡಬೇಡಿ ಎಂದು ಹೇಳಿದ್ದಕ್ಕೆ ಆಗ 2ನೇ ಆರೋಪಿ ನನ್ನನ್ನು ತಬ್ಬಿ ಹಿಡಿದುಕೊಂಡು 1ನೇ ಆರೋಪಿ ತನ್ನ ಬಲಗೈ ಮುಷ್ಠಿ ಯಿಂದ ನನ್ನ ಎಡಗಣ್ಣಿನ ಮೇಲ್ಭಾಗಕ್ಕೆ ಹಲ್ಲೆ ಮಾಡಿ ನೋವುಂಟು ಮಾಡಿರುತ್ತಾರೆ. ಆನಂತರ ಊರಿನವರೆಲ್ಲಾ ಬರುವಷ್ಟರಲ್ಲಿ ಆರೋಪಿತರು ಓಡಿ ಹೋಗಿರುತ್ತಾರೆ. ನಾನು ಈ ಬಗ್ಗೆ ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ದಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ.

ದೂರು ನೀಡಿದ ನಂತರ ಪೋಲಿಸರು ಘಟನೆ ನಡೆದ ಸ್ಥಳದಲ್ಲಿ ಪರಿಶೀಲನೆ ಮಾಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 11.00-12.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನಂತರ ಪೋಲಿಸರಿಗೆ ಪ್ರಕರಣಕ್ಕೆ ಸಂಬಂದಪಟ್ಟಂತೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ಪಾಟೀ ಸವಾಲುಃ ಎಪಿಪಿಯವರಿಂದಃ**

1 ನೇ ಆರೋಪಿ ಘಟನಾ ದಿನದಂದು ಇನ್ನೊಂದು ಈ ಜಾಗದ ವಿಚಾರಕ್ಕೆ ಬಂದರೆ ನಿನಗೊಂದು ಗತಿ ಕಾಣಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ದಿಃ 23.06.2022 ರಂದು ನಿಪಿ-2 ಅನ್ನು ಮಾಡುವ ಸಮಯದಲ್ಲಿ ಚಾಸಾ4 ರವರು ಸಹ ಹಾಜರಿದ್ದರು ಎಂದರೆ ಸರಿ. ಘಟನೆಗೆ ಸಂಬಂದಪಟ್ಟಂತೆ ನಾನು ಘಟನಾ ದಿನ ಅಲ್ಲದೇ ದಿಃ22.06.2022ರಂದು ಠಾಣೆಗೆ ಹಾಜರಾಗಿ ದೂರನ್ನು ನೀಡಿರುತ್ತೇನೆಂದರೆ ಸಾಕ್ಷಿಯು ನನಗೆ ಗಾಯವಾದ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ದೂರನ್ನು ನೀಡಿರುತ್ತೇನೆಂದು ನುಡಿಯುತ್ತಾರೆ.

ಆರೋಪಿ ಪರ ವಕೀಲರು ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**